# ಸ್ಟಾರ್ಟಪ್ ಗಳ ಉತ್ತೇಜನಕ್ಕೆ ಫ್ಲಿಪ್ ಕಾರ್ಟ್‌ನಿಂದ ಫ್ಲಿಪ್ ಕಾರ್ಟ್ ಲೀಪ್ ಕಾರ್ಯಕ್ರಮ

- **ಹೊಸ ಮತ್ತು ಭವಿಷ್ಯದ ಸ್ಟಾರ್ಟಪ್ ಗಳ ಬೆಳವಣಿಗೆಗೆ ಈ ಕಾರ್ಯಕ್ರಮ**
- **ತಂತ್ರಜ್ಞಾನದಲ್ಲಿ ನಾವೀನ್ಯತೆ ಮತ್ತು ಗ್ರಾಹಕ ಆಧಾರಿತ ಉದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹ**
- **ಇಂದಿನಿಂದ ಫ್ಲಿಪ್ ಕಾರ್ಟ್ ಲೀಪ್‌ಗೆ ನೋಂದಣಿಗೆ ಅವಕಾಶ**
- **ನಾವೀನ್ಯತೆ ಇರುವ ಸ್ಟಾರ್ಟಪ್ ಗಳ ಗುರುತಿಸಿ ಪ್ರಗತಿಗೆ ಪೂರಕವಾದ ತರಬೇತಿ ನೀಡಲಿರುವ ಕಾರ್ಯಕ್ರಮ**
- **16 ವಾರಗಳ ತರಬೇತಿ ಕಾರ್ಯಕ್ರಮ**
- **25,000 ಡಾಲರ್ ವರೆಗೆ ಉಚಿತ ಅನುದಾನ ಗೆಲ್ಲುವ ಅವಕಾಶ**

ಬೆಂಗಳೂರು, ಆಗಸ್ಟ್ 10, 2020: ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಇಂದು 'ಫ್ಲಿಪ್ ಕಾರ್ಟ್ ಲೀಪ್' ಕಾರ್ಯಕ್ರಮಕ್ಕೆ ಚಾಲನೆ ನೀಡಿತು. ಇದು ಮೊದಲ ಸ್ಟಾರ್ಟಪ್ ಉತ್ತೇಜನ ಕಾರ್ಯಕ್ರಮವಾಗಿದೆ. ಇದರ ಪ್ರಮುಖ ಉದ್ದೇಶ ಹೊಸ ಮತ್ತು ಮುಂಬರುವ ಸ್ಟಾರ್ಟಪ್‌ಗಳಿಗೆ ನೆರವಾಗುವುದಾಗಿದೆ. ಅಂದರೆ, ಸ್ಟಾರ್ಟಪ್ ಗಳು ಬೆಳವಣಿಗೆ ಹೊಂದುವುದು, ತಮ್ಮ ಮಟ್ಟವನ್ನು ಹೆಚ್ಚಿಸಿಕೊಳ್ಳುವುದು, ಸವಾಲುಗಳನ್ನು ಎದುರಿಸುವುದು ಮತ್ತು ಭಾರತದಲ್ಲಿ ಬೆಳೆಯುತ್ತಿರುವ ಉದ್ಯಮಶೀಲತ್ವ ಪರಿಸರಕ್ಕೆ ಕೊಡುಗೆಯನ್ನು ನೀಡುವುದು ಹಾಗೂ 'ಸ್ಟಾರ್ಟಪ್ ಇಂಡಿಯಾ'ಗೆ ಪ್ರೋತ್ಸಾಹ ನೀಡುವುದಾಗಿದೆ. ಈ ಕಾರ್ಯಕ್ರಮಕ್ಕೆ ನೋಂದಣಿ ಮಾಡಿಸಿಕೊಳ್ಳುವ ಪ್ರಕ್ರಿಯೆಯನ್ನು ಇಂದಿನಿಂದ ಆರಂಭ ಮಾಡಲಾಗಿದ್ದು, ಫ್ಲಿಪ್ ಕಾರ್ಟ್ ಲೀಪ್ ಬಿ2ಸಿ ಮತ್ತು ಬಿ2ಬಿ ಸ್ಟಾರ್ಟಪ್ ಗಳನ್ನು ಗುರುತಿಸಲಿದೆ ಮತ್ತು ಸಮಗ್ರ 16 ವಾರಗಳ ವರ್ಚುವಲ್ ಕಾರ್ಯಕ್ರಮದ ಮೂಲಕ ತಮ್ಮ ಮಟ್ಟವನ್ನು ಹೆಚ್ಚಳ ಮಾಡಿಕೊಳ್ಳಲು ಸಹಾಯ ಮಾಡಲಿದೆ. ಈ ಕಾರ್ಯಕ್ರಮದಲ್ಲಿ ಫ್ಲಿಪ್‌ಕಾರ್ಟ್‌ನ ಬ್ಯುಸಿನೆಸ್, ಆಪರೇಷನ್, ಉತ್ಪನ್ನ ಮತ್ತು ತಂತ್ರಜ್ಞಾನ ಪರಿಣತರು ಆಯ್ದ ಸ್ಟಾರ್ಟಪ್ ಗಳಿಗೆ ಸಂಯೋಜಕರಾಗಿರಲಿದ್ದಾರೆ ಮತ್ತು ಅವುಗಳ ಬೆಳವಣಿಗೆಗೆ ಪೂರಕವಾದ ಪದ್ಧತಿಗಳನ್ನು ಹೇಳಿಕೊಡಲಿದ್ದಾರೆ. ಇದಲ್ಲದೇ, ಉದ್ಯಮದ ಪರಿಣತರಿಂದ ವಿಶೇಷ ತರಗತಿಗಳೂ ಇರಲಿವೆ.

ಮಾರುಕಟ್ಟೆಗೆ ಸಿದ್ಧವಾದ ಪರಿಹಾರಗಳನ್ನು ನಿರ್ಮಾಣ ಮಾಡಲು ಸ್ಟಾರ್ಟ್‌ಗಳಿಗೆ ಬೆಂಬಲ ನೀಡುವ ಮೂಲಕ ವಿಶ್ವದರ್ಜೆಯ ಮೌಲ್ಯಾಧಾರಿತ ಉತ್ಪನ್ನಗಳನ್ನು ತಯಾರಿಸಲು ಪೂರಕವಾದ ಟೂಲ್‌ಗಳು, ಫ್ರೇಂವರ್ಕ್, ಜ್ಞಾನವನ್ನು ನೀಡುವಂತಹ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಈ ಕಾರ್ಯಕ್ರಮ ನೆರವಾಗಲಿದೆ. ಫ್ಲಿಪ್ ಕಾರ್ಟ್ ನ ಉನ್ನತ ಮಟ್ಟದ ಸಂಯೋಜಕರಿಂದ ತಂತ್ರಜ್ಞಾನ ಮತ್ತಯ ಆಳವಾದ ಉದ್ಯಮದ ಪರಿಣತಿಯನ್ನು ಪಡೆಯುವುದರೊಂದಿಗೆ ಸ್ಟಾರ್ಟಪ್ ಗಳು ಡೈನಾಮಿಕ್ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ದಾಪುಗಾಲು ಇಟ್ಟು ಸಮರ್ಥವಾದ ಸ್ಪರ್ಧೆಯನ್ನು ನೀಡಬಹುದಾಗಿದೆ. ಸೂಕ್ತವಾದ ಹೆಚ್ಚು ಸಾಧ್ಯತೆ ಇರುವ ಸ್ಟಾರ್ಟಪ್ ಗಳನ್ನು ಆಯ್ಕೆ ಮಾಡಿಕೊಳ್ಳಲು ಫ್ಲಿಪ್ ಕಾರ್ಟ್ ಲೀಪ್ ಗೆ ಐದು ಪರಿಕಲ್ಪನೆಗಳನ್ನು ಅಥವಾ ವಿಷಯಗಳನ್ನು ಶಾರ್ಟ್ ಲೀಸ್ಟ್ ಮಾಡಲಿದೆ. ಇವುಗಳೆಂದರೆ, ವಿನ್ಯಾಸ ಮತ್ತು ಮೇಕ್ ಫಾರ್ ಇಂಡಿಯಾ, ಡಿಜಿಟಲ್ ಕಾಮರ್ಸ್ ನಲ್ಲಿ ನಾವೀನ್ಯತೆ, ರೀಟೇಲ್ ವ್ಯವಸ್ಥೆಯನ್ನು ಸಬಲೀಕರಣಗೊಳಿಸಲು ತಂತ್ರಜ್ಞಾನಗಳು,

ಸಪ್ಲೇ ಚೈನ್ ಮ್ಯಾನೇಜ್ಮೆಂಟ್ & ಲಾಜಿಸ್ಟಿಕ್ ಮತ್ತು ಎನೇಬಲಿಂಗ್ ರಿಲೆವೆಂಟ್ ಡೀಪ್ ಟೆಕ್ ಅಪ್ಲಿಕೇಷನ್ ಗಳು. ತಂತ್ರಜ್ಞಾನ ಮತ್ತು ಗ್ರಾಹಕ ಇಂಟರ್ನೆಟ್ ಸ್ಪೇಸ್ ನಲ್ಲಿ ಅತ್ಯಂತ ಹೆಚ್ಚು ನಾವೀನ್ಯತೆಯ ಹಾಗೂ ಭಾರತೀಯ ಗ್ರಾಹಕರಿಗೆ ಪರಿಹಾರಗಳನ್ನು ಒದಗಿಸಲು ಪೂರಕವಾಗಿ ಈ ವಿಷಯಗಳನ್ನು ಗುರುತಿಸಲಾಗುತ್ತಿದೆ. ಈ ವಿಷಯಗಳ ಕ್ಷೇತ್ರದಲ್ಲಿ ಡಿಜಿಟಲೀಕರಣ ಮತ್ತು ತಾಂತ್ರಿಕ ಸುಧಾರಣೆಯನ್ನು ತರಲು ಆದ್ಯತೆ ನೀಡಲಾಗುತ್ತದೆ. ಯಾವುದೇ ಮುಂದಿನ ಐದು ವರ್ಷಗಳಲ್ಲಿ ಇ-ಕಾಮರ್ಸ್ ಕ್ಷೇತ್ರದ ಸುಧಾರಣೆಗೆ ಅತ್ಯಂತ ವಿನೂತನವಾದ ಪರಿಹಾರಗಳನ್ನು ಕಂಡು ಹಿಡಿಯುವಂತಹ ಸ್ಟಾರ್ಟಪ್ ಗೂ ಸಹ ಆದ್ಯತೆ ನೀಡಲಾಗುತ್ತದೆ.

**ಈ ಉಪಕ್ರಮದ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ಗ್ರೂಪ್ ನ ಮುಖ್ಯ ಕಾರ್ಯಕಾರಿ ಅಧಿಕಾರಿ ಕಲ್ಯಾಣ್ ಕೃಷ್ಣಮೂರ್ತಿ** ಅವರು, "ಆರಂಭದ ದಿನದಿಂದಲೂ ಫ್ಲಿಪ್ ಕಾರ್ಟ್ ಅತ್ಯಂತ ಜನಪ್ರಿಯವಾಗಿರುವ ದೇಶೀಯ ಬ್ರ್ಯಾಂಡ್ ಗಳಲ್ಲಿ ಒಂದಾಗಿದೆ. ಭಾರತದ ಸ್ಟಾರ್ಟಪ್ ವ್ಯವಸ್ಥೆಗೆ ಇದು ಅತ್ಯಂತ ನೆರವಾಗುವ ಸಂಸ್ಥೆ ಎನಿಸಿದೆ. ಪ್ರತಿದಿನ ತಂತ್ರಜ್ಞಾನದಲ್ಲಿ ಆಗುತ್ತಿರುವ ನಾವೀನ್ಯತೆಗಳು ಮತ್ತು ಅಡೆತಡೆಗಳನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ನಾವು ಮುಂಚೂಣಿಯಲ್ಲಿರಬೇಕೆಂದು ಬಯಸಿದ್ದೇವೆ ಮತ್ತು ಈ ನಿಟ್ಟಿನಲ್ಲಿ ಸ್ಟಾರ್ಟಪ್ ಗಳಿಗೆ ನೆರವಾಗುವ ಮೂಲಕ ಉದ್ಯಮ ಮತ್ತು ಭಾರತೀಯ ಗ್ರಾಹಕರಿಗೆ ಒಂದು ಮೌಲ್ಯವನ್ನು ತಂದುಕೊಡುವ ಉದ್ದೇಶ ನಮ್ಮದಾಗಿದೆ. ಫ್ಲಿಪ್ ಕಾರ್ಟ್ ಲೀಪ್ ಹೊಸ ಹೊಸ ಸಾಧ್ಯತೆಗಳು ತೆರೆದುಕೊಳ್ಳುವಂತೆ ಮಾಡುವುದು ಮತ್ತು ನಾವೀನ್ಯತೆ, ಕುತೂಹಲವನ್ನು ಉಂಟು ಮಾಡುವ ಸ್ಥಳೀಯ ಉದ್ಯಮಶೀಲತ್ವ ವ್ಯವಸ್ಥೆಯನ್ನು ಸದೃಢಗೊಳಿಸುವಂತಹ ಹೊಸ ವಿಚಾರಧಾರೆಗಳಿಗೆ ನೆರವಾಗುವ ಉದ್ದೇಶವನ್ನು ಹೊಂದಿದೆ. ಈ ಮೂಲಕ ಸರ್ಕಾರದ 'ಸ್ಟಾರ್ಟ್-ಅಪ್ ಇಂಡಿಯಾ' ಉಪಕ್ರಮಕ್ಕೆ ಉತ್ತೇಜನ ನೀಡುವುದಾಗಿದೆ" ಎಂದು ತಿಳಿಸಿದರು.

**ಇದೇ ವೇಳೆ ಮಾತನಾಡಿದ ಫ್ಲಿಪ್ ಕಾರ್ಟ್ ನ ಚೀಫ್ ಪ್ರಾಡಕ್ಟ್ ಅಂಡ್ ಟೆಕ್ನಾಲಜಿ ಆಫೀಸರ್ ಜಯ್ ವೇಣುಗೋಪಾಲ್ ಅವರು**, "ಕಳೆದ ಕೆಲವು ವರ್ಷಗಳಿಂದ ಭಾರತದಲ್ಲಿ ಸ್ಟಾರ್ಟಪ್ ವ್ಯವಸ್ಥೆಯು ಸಾಕಷ್ಟು ರೂಪಾಂತರಗೊಳ್ಳುತ್ತಿದೆ. ಈ ಮೂಲಕ ದೇಶವು ಅತ್ಯುತ್ತಮ ಸ್ಟಾರ್ಟಪ್ ಗಳ ತವರು ಆದಂತಾಗಿದೆ. ಪ್ರತಿಭಾನ್ವಿತ ಉದ್ಯಮಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ ಮತ್ತು ಮಾರುಕಟ್ಟೆಯಲ್ಲಿ ತಮ್ಮ ಪರಿಹಾರಗಳನ್ನು ನಿರೀಕ್ಷೆಗೂ ಮೀರಿದ ಮಟ್ಟದಲ್ಲಿ ಪೂರೈಕೆ ಮಾಡುತ್ತಿದ್ದಾರೆ. ಕಂಪನಿಯಾಗಿ ರೂಪಿಸಿಕೊಂಡು ಹಂತಹಂತವಾಗಿ ತಮ್ಮದೇ ಆದ ಯಶಸ್ಸಿನ ಮೆಟ್ಟಿಲು ಹತ್ತುತ್ತಿದ್ದಾರೆ. ಈ ದಿಸೆಯಲ್ಲಿ ಈ ಆರಂಭಿಕ ಹಂತದಲ್ಲಿಯೇ ಸ್ಟಾರ್ಟಪ್ ಗಳಿಗೆ ನೆರವಾಗಲು ಮತ್ತು ಭವಿಷ್ಯದಲ್ಲಿ ಯಶಸ್ವಿ ಬ್ರ್ಯಾಂಡ್ ಗಳನ್ನಾಗಿ ತಯಾರು ಮಾಡಲೆಂದೇ ನಮ್ಮ ಜಾಲವನ್ನು ಬಳಸಿಕೊಳ್ಳಲು ಬಯಸಿದ್ದೇವೆ" ಎಂದು ಹೇಳಿದರು.

ಈ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ನರೇನ್ ರಾವುಲಾ ನೇತೃತ್ವದ ಫ್ಲಿಪ್ ಕಾರ್ಟ್ ನ ಪ್ರಾಡಕ್ಟ್ ಸ್ಟ್ರಾಟೆಜಿ & ಡಿಪ್ಲಾಯ್ಮೆಂಟ್ ತಂಡವು ಈ ಕಾರ್ಯಕ್ರಮವನ್ನು ನಿರ್ವಹಣೆ ಮಾಡಲಿದೆ. ಫ್ಲಿಪ್ ಕಾರ್ಟ್ ನ ವಾಣಿಜ್ಯ ಕಂಪನಿಗಳು (ಫ್ಲಿಪ್ ಕಾರ್ಟ್ ಮತ್ತು ಮೈಂತ್ರಾ) ಹಾಗೂ ವಿಶಾಲ ವ್ಯವಸ್ಥೆಯಲ್ಲಿ ಹೊಸತನವನ್ನು ತರುವ ಮತ್ತು ನೋಡಿಕೊಳ್ಳುವ ಜವಾಬ್ದಾರಿಯನ್ನು ಈ ತಂಡವು ಹೊಂದಿದೆ.

ಕೇವಲ ಭಾರತಕ್ಕಾಗಿ ನಾವೀನ್ಯತೆ ತರಲು ಆದ್ಯತೆ ನೀಡುವುದಿಲ್ಲ, ಇದರ ಬದಲಿಗೆ ಭಾರತ್ ಬಳಕೆದಾರರಿಗೆ (2 ಮತ್ತು 3 ನೇ ದರ್ಜೆಯ ನಗರಗಳು) ಹೊಸತನವನ್ನು ತರಲು ಆದ್ಯತೆ ನೀಡಲಿದೆ. ಝಿನ್ನೋವ್ ಪಾಲುದಾರಿಕೆಯಲ್ಲಿ ಈ 16 ವಾರಗಳ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಮಾರುಕಟ್ಟೆಗೆ ಸಿದ್ಧವಾದ ನಾವೀನ್ಯತೆಯ ಪರಿಹಾರಗಳನ್ನು ಸಿದ್ಧಪಡಿಸಲು ಸ್ಟಾರ್ಟಪ್ ಗಳಿಗೆ

ಅವಕಾಶಗಳನ್ನು ನೀಡುತ್ತಿದೆ ಮತ್ತು ಅತ್ಯುತ್ತಮವಾದ ವಿಚಾರವನ್ನು ಹೊಂದಿರುವ ಪರಿಹಾರಕ್ಕೆ 25,000 ಡಾಲರ್ ಗಳ ಉಚಿತವಾದ ಅನುದಾನವೂ ಸಿಗಲಿದೆ. ಫ್ಲಿಪ್ ಕಾರ್ಟ್ ಲೀಪ್ ಗೆ ಅರ್ಜಿ ಸಲ್ಲಿಸುವ ಸ್ಟಾರ್ಟಪ್ ಗಳು ಭಾರತೀಯ ಮೂಲದ್ದಾಗಿರಬೇಕು ಮತ್ತು ಆರಂಭಿಕ ದತ್ತು ಮಾಪನಗಳೊಂದಿಗೆ ಕೆಲಸ ಮಾಡುವ ಮೂಲಮಾದರಿಯನ್ನು ಹೊಂದಿರಬೇಕು. ಈ ಕಾರ್ಯಕ್ರಮದ ನಂತರ ಫ್ಲಿಪ್ ಕಾರ್ಟ್ ಲೀಪ್ ನ ಅಂತಿಮ ಸುತ್ತಿನಲ್ಲಿ ಬರುವ ಸ್ವರ್ಧಿಗಳು ತಮ್ಮ ಯಶಸ್ವಿ ಮಾದರಿಗಳನ್ನು ಹೂಡಿಕೆದಾರರು, ಕಾರ್ಪೊರೇಟ್ ಗಳು ಮತ್ತು ಇತರರ ಸಮ್ಮುಖದಲ್ಲಿ ಪ್ರದರ್ಶನ ನೀಡಬೇಕು. ಇದಲ್ಲದೇ, ಫ್ಲಿಪ್ ಕಾರ್ಟ್ ನ ಧನಸಹಾಯಕ್ಕೂ ಪರಿಗಣನೆಯಾಗಲಿವೆ.

ಉದ್ಯಮದ ವರದಿಗಳ ಪ್ರಕಾರ, ವಿಶ್ವದಲ್ಲಿ ಭಾರತ ಮೂರನೇ ಅತಿದೊಡ್ಡ ಸ್ಟಾರ್ಟಪ್ ವ್ಯವಸ್ಥೆಯನ್ನು ಹೊಂದಿರುವ ದೇಶವಾಗಿದೆ. ಸ್ಟಾರ್ಟಪ್ ಕ್ಷೇತ್ರದಲ್ಲಿ ವಾರ್ಷಿಕ ಶೇ.12-15 ರಷ್ಟು ಹೆಚ್ಚಳ ಕಂಡು ಬರುತ್ತಿದೆ. ವರದಿ ಪ್ರಕಾರ ಪ್ರತಿದಿನ ಭಾರತದಲ್ಲಿ ಎರಡರಿಂದ ಮೂರು ಸ್ಟಾರ್ಟಪ್ ಗಳು ಹುಟ್ಟಿಕೊಳ್ಳುತ್ತಿವೆ. ಇದರ ಪರಿಣಾಮ ಕೆಲವು ವರ್ಷಗಳಿಂದ ಭಾರತದಲ್ಲಿ ಅತ್ಯುತ್ತಮ ಸ್ಟಾರ್ಟಪ್ ಗಳು ಅಸ್ತಿತ್ವಕ್ಕೆ ಬಂದಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಂಬಲ ಹೆಚ್ಚಾಗುತ್ತಿರುವುದು ಮತ್ತು ನಿಯಂತ್ರಣ, ನೀತಿಗಳಲ್ಲಿ ಸುಧಾರಣೆ ಕಂಡುಬಂದಿರುವುದರಿಂದ ಸ್ಟಾರ್ಟಪ್ ಗಳು ಸಮರ್ಪಕವಾಗಿ ಪ್ರಾರಂಭವಾಗಲು ಸೂಕ್ತವಾದ ವಾತಾವರಣ ನಿರ್ಮಾಣವಾಗಿದೆ. ಈ ಮೂಲಕ ಮುಂದಿನ ಶತಕೋಟಿ ಗ್ರಾಹಕರನ್ನು ಪರಿಣಾಮಕಾರಿಯಾಗಿ ತಲುಪಲು ಈ ವಿಭಾಗವು ಸನ್ನದ್ಧವಾಗಿದೆ.

ಫ್ಲಿಪ್ ಕಾರ್ಟ್ ಲೀಪ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ಸಲ್ಲಿಸಲು ದಯಮಾಡಿ ಇಲ್ಲಿಗೆ ಭೇಟಿ ನೀಡಿ.

https://www.flipkartleap.com/

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution, with a registered customer base of over 250 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, PhonePe, India's fastest growing digital payments platform, and now Flipkart Wholesale, the Flipkart Group will continue to steer the transformation of commerce in India through technology.

**For more information, please write to: media@flipkart.com**